ದಿನಾಂಕ: 25.09.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ ಜಿ ಸಿ ಪಿ ವಕೀಲರಿಂದಃ**

ವಾದಿಯು ನನ್ನ ಮೇಲೆ ಕೇಸ್ ಹಾಕಿರುತ್ತಾರೆ. ವಾದಿ ನನಗೆ ಮಗಳಾಗಬೇಕು. ನನ್ನ ಹೆಂಡತಿ ಹೆಸರು ವೀಣಾಕ್ಷಿ. ಸಾಕ್ಷಿ ಮುಂದುವರೆದು ನನಗೂ ಅವರಿಗೂ ವಿಚ್ಛೇದನವಾಗಿರುತ್ತದೆ, ನನಗೂ ಅವರಿಗೂ 2012 ರಲ್ಲಿ ಮನಸ್ತಾಪ ಉಂಟಾಗಿದ್ದು. ಅದಕ್ಕಿಂತ ಪೂರ್ವದಲ್ಲಿ ನಾನು ಅವರು ಚನ್ನಾಗಿದ್ದೆವು ಎಂದರೆ ನಿಜ. ಈ ಕೇಸ್ ಹಾಕುವ ಪೂರ್ವದಲ್ಲಿ ನಮ್ಮ ಕುಟುಂಬದ ಕರ್ತ ನನ್ನ ತಂದೆ ಆಗಿರುತ್ತಾರೆ. ನಮ್ಮ ಕುಟುಂಬದ ಆಗು ಹೋಗುಗಳನೆಲ್ಲಾ ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ನಿಜ. ಈ ಕೇಸ್ ಸಲ್ಲಿಸುವ ಸಮಯದಲ್ಲಿ ಸಾದಾರಣ ಮಳೆ ಬೆಳೆ ಆಗುತ್ತಿತ್ತು. ಆಗ ಬೆಳೆಗಳು ಕಮ್ಮಿ ಬರುತ್ತಿತ್ತು ಎಂದರೆ ನಿಜ. ಖರ್ಚು ಮಾಡಿದಷ್ಟು ಉತ್ಪಾನೆ ಇರಲಿಲ್ಲ ಎಂದರೆ ಸರಿ. ಅಲ್ಪ ಸ್ವಲ್ಪ ವ್ಯವಸಾಯದಿಂದ ಬಂದ ಉತ್ಪನ್ನದಲ್ಲಿ ಜೀವನ ಮಾಡುತ್ತಿದ್ದೆವು. ಮಕ್ಕಳ ಮದುವೆ ಮಾಡಲು ನನ್ನ ತಂದೆ ಸಾಲ ಮಾಡುತ್ತಿದ್ದರು . ನನ್ನ ತಂದೆ ಕೈ ಸಾಲವನ್ನು ನನ್ನ ದೊಡ್ಡಪ್ಪನ ಮಗನಿಂದ ಪಡೆದಿರುತ್ತಾರೆ. ಸುಮಾರು 25-30 ಲಕ್ಷ ಸಾಲ ಮಾಡಿದ್ದಾರೆ. ಆ ಸಾಲ ತೀರುವಳಿಗಾಗಿ ಜಮೀನುಮಾರಾಟ ಮಾಡಿದ್ದಾರೆ. ಮಾರಾಟ ಮಾಡುವ ಮೊದಲು ಕುಟುಂಬದ ಎಲ್ಲಾ ಸದಸ್ಯರನ್ನು ಕರೆದು ವಿಚಾರ ತಿಳಿಸಿ ಮಾರಾಟ ಮಾಡಿದ್ದಾರೆ. ಪ್ರಕಾಶ್ ನನ್ನ ತಮ್ಮನಾಗಬೇಕು. ದಾವಾಸ್ತಿಯಲ್ಲಿ ನನಗೆ ಪಾಲು ಇದೆ ಎಂದರೆ ನಿಜ.

ನಾನು ಬೆಂಗಳೂರಿನಲ್ಲಿ ಸೈಟ್ ತೆಗೆದುಕೊಂಡಿದ್ದು ಅದಕ್ಕೆ ನಾನು ರೂ.5 ಲಕ್ಷ ಹಾಕಿದ್ದು ಉಳಿದ ಹಣ ನನ್ನ ತಂದೆ ಕೊಟ್ಟಿರುತ್ತಾರೆ. ಈ ವಿಚಾರ ನನ್ನ ಕುಟುಂಬದ ಎಲ್ಲಾ ಸದಸ್ಯರಿಗೆ ಗೊತ್ತಿತ್ತು. ನನ್ನ ತಂದೆಯ ಜೀವಿತ ಕಾಲದಲ್ಲಿ ನನ್ನ ತಮ್ಮ ನೋಡಿಕೊಳ್ಳುತ್ತಿದ್ದರು. ನನ್ನ ತಂದೆ ನನ್ನ ತಮ್ಮನಿಗೆ ಅವರ ಆಸ್ತಿಯನ್ನು ವಿಲ್ ಮಾಡಿರುತ್ತಾರೆ. 2018 ರಲ್ಲಿ ವಿಲ್ ಮಾಡಿರುತ್ತಾರೆ. ವಿಲ್ ಮಾಡುವ ಸಮಯದಲ್ಲಿ ನನ್ನ ತಂದೆ ಮನಸ್ಸು ಸ್ಥಿಮಿತದಲ್ಲಿ ಇದ್ದು, ಆರೋಗ್ಯವಾಗಿದ್ದು ಸ್ವಾಇಚ್ಚೆಯಿಂದ ವಿಲ್

ಮಾಡಿದರು ಎಂದರೆ ನಿಜ. ವಿಲ್ ಪ್ರತಿಯನ್ನು ಹಾಜರು ಮಾಡಲು ತೊಂದರೆ ಇರುವುದಿಲ್ಲ. ನನ್ನ ತಂದೆ ಮೃತ ಪಟ್ಟು 3 ವರ್ಷಗಳು ಆಗಿದೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು